# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ:KPTCL/KCO-129/66026/2016-17
ಲಗತ್ತು:

ನಿಗಮ ಕಾರ್ಯಾಲಯ
ಕ.ವಿ.ಪ್ರ.ನಿ.ನಿ ಕಾವೇರಿ ಭವನ
ಬೆಂಗಳೂರು-560009

16 FEB 2017

1. ಎಲ್ಲಾ ಮುಖ್ಯ ಇಂಜಿನೀಯರ್(ವಿ)/ನಿಯಂತ್ರಣಾಧಿಕಾರಿಗಳು,
   ಕ.ವಿ.ಪ್ರ.ನಿ.ನಿ, ಪ್ರಸರಣ ವಲಯ/ಎಸ್.ಎಲ್.ಡಿ.ಸಿ/ಟಿ.ಬಿ.ಸಿ.
2. ಎಲ್ಲಾ ಅಧೀಕ್ಷಕ ಇಂಜಿನೀಯರ್(ವಿ)/ಉಪ ನಿಯಂತ್ರಣಾಧಿಕಾರಿಗಳು,
   ಕಾಮಗಾರಿ ಮತ್ತು ನಿರ್ವಹಣೆ ವೃತ್ತ ಕ.ವಿ.ಪ್ರ.ನಿ.ನಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್(ವಿ)/ಲೆಕ್ಕಾಧಿಕಾರಿಗಳು,
   ಬೃಹತ್ ಕಾಮಗಾರಿ/ಪ್ರಸರಣ ಮಾರ್ಗ ಮತ್ತು ಉಪಕೇಂದ್ರಗಳ ವಿಭಾಗ/ಕ.ವಿ.ಪ್ರ.ನಿ.ನಿ.

ಮಾನ್ಯರೆ,

ವಿಷಯ: ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಕವಿಪ್ರನಿನಿ/ವಿಸಕಂಗಳ ನೌಕರರ ಪಿಂಚಣಿ ವಂತಿಕೆಗೆ ಸಂಬಂಧಿಸಿದ ಅನುಬಂಧ-4 ರ ವಿವರಗಳನ್ನು ಲೆಕ್ಕ ಘಟಕಗಳು ನೇರವಾಗಿ ತಂತ್ರಾಂಶದಲ್ಲಿ ದಾಖಲಿಸುವ ಬಗ್ಗೆ.

ಉಲ್ಲೇಖ: 1. ನಿಗಮದ ಆದೇಶದ ಸಂಖ್ಯೆ ಕವಿಪ್ರನಿನಿ/ಬಿ.93/35978/2014-15 ದಿನಾಂಕ 04.05.2015.
2. ನಿಗಮದ ಪತ್ರ ಸಂಖ್ಯೆ ಕವಿಪ್ರನಿನಿ/ಬಿ. B93/35989/2016-17 ದಿನಾಂಕ 31.08.2016.
3. ನಿಗಮದ ಪತ್ರ ಸಂಖ್ಯೆ ಕವಿಪ್ರನಿನಿ/ಬಿ. B93/35989/2016-17 cys-9 ದಿನಾಂಕ 27.09.2016.
4. ಈ ಕಛೇರಿ ಪತ್ರ ಸಂಖ್ಯೆ ಕವಿಪ್ರನಿನಿ/ಕೆಸಿಓ-129/66026/2016-17 ದಿನಾಂಕ: 09.11.2016.

*******

ಉಲ್ಲೇಖ-3ರ ನಿಗಮದ ಪತ್ರದ ಕಡೆ ಗಮನ ಕೋರಲಾಗಿದೆ. ಸದರಿ ಪತ್ರದಲ್ಲಿ ತಿಳಿಸಿರುವಂತೆ ಕವಿಪ್ರನಿನಿಯ ಐಟಿ.ಎಂ.ಐ.ಎಸ್ ಘಟಕವು ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು ಅದನ್ನು ಕವಿಪ್ರನಿನಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಕವಿಪ್ರನಿನಿಯ ಎಲ್ಲಾ ಘಟಕಗಳು ಈಗಾಗಲೇ ಜುಲೈ-16 ರಿಂದ ಪ್ರಾರಂಭಿಸಿ ಪ್ರತಿ ಮಾಹೆಯ ಅಧಿಕಾರಿ/ನೌಕರರ ಪಿಂಚಣಿ ಕೊಡುಗೆಯ ವಿವರಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ದಾಖಲಿಸಿರುತ್ತಾರೆ.

ಮುಂದುವರೆಯುತ್ತ ಇನ್ನು ಮುಂದೆ ಎಲ್ಲಾ ಕವಿಪ್ರನಿನಿ ಲೆಕ್ಕ ಘಟಕಗಳು ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ವಂತಿಗೆ ವಿವರಗಳನ್ನು ಗರಿಷ್ಟ 3ನೇ ತಾರೀಖಿನೊಳಗೆ ಹೊಸದಾಗಿ ಅಭಿವೃದ್ಧಿಪಡಿಸಿದ ಆನ್‌ಲೈನ್ ತಂತ್ರಾಂಶದಲ್ಲಿ ವಿವರಗಳನ್ನು ಕಡ್ಡಾಯವಾಗಿ ದಾಖಲಿಸುವುದು ಹಾಗೂ ಹಳೆಯ ಆನ್‌ಲೈನ್ ತಂತ್ರಾಂಶದಲ್ಲಿ ವಿವರಗಳನ್ನು ದಾಖಲಿಸುವುದನ್ನು ರದ್ದು ಪಡಿಸಲಾಗಿದೆ.

ದಿನಾಂಕ 01.04.2006ರ ಹಿಂದೆ ನೇಮಕವಾದ ಅಧಿಕಾರಿ/ನೌಕರರ ಪಿಂಚಣಿ ಮತ್ತು ಉಪದಾನ ವಂತಿಗೆಯ ವಿವರಗಳನ್ನು ಈಗಾಗಲೇ ದಾಖಲಿಸುತ್ತಿರುವ ಆನ್‌ಲೈನ್ ತಂತ್ರಾಂಶದಲ್ಲಿ ಗರಿಷ್ಟ 3ನೇ ತಾರೀಖಿನೊಳಗೆ ದಾಖಲಿಸುವುದು ಹಾಗೂ ಇದರಲ್ಲಿ ಯಾವುದೇಬದಲಾವಣೆ ಇರುವುದಿಲ್ಲ.

ತಮ್ಮ ವಿಶ್ವಾಸಿ

ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಪ್ರತಿಗಳು:

1. ಆರ್ಥಿಕ ಸಲಹೆಗಾರರು (ಪಿಂಚಣಿ ಮತ್ತು ಉಪದಾನ) ಟ್ರಸ್ಟ್, 6ನೇ ಮಹಡಿ, ಕಾವೇರಿ ಭವನ ಬೆಂಗಳೂರು.
2. ಅಧೀಕ್ಷಕ ಇಂಜಿನೀಯರ್(ವಿ), IT & MIS ಕವಿಪ್ರನಿನಿ ರವರ ಮಾಹಿತಿಗಾಗಿ ಹಾಗೂ ಪ್ರಕಟಣೆಗಾಗಿ.
3. ಮುಖ್ಯ ಕಡತ.

EE(IT) 16/2/17